**ದಿನಾಂಕಃ 03-11-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಪಿ.ಸಿ.ಎಸ್. ವಕೀಲರಿಂದ ಪ್ರತಿವಾದಿ ಸಂಖ್ಯೆ 6 ರಿಂದ 12 ಪರಃ**

ನಾನು ಬಿ.ಎಸ್ಸಿ ಡಿ.ಫಾರ್ಮ ಮಾಡಿರುತ್ತೇನೆ. ನನ್ನ ದಾವೆಗೆ ಮತ್ತು ಮುಖ್ಯ ವಿಚಾರಣೆಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. 1 ನೇ ಪ್ರತಿವಾದಿ ನನ್ನ ತಂದೆ ಇರುತ್ತಾರೆ. ನನ್ನ ತಂದೆಯ ದತ್ತಕ ತಂದೆ 3 ಜನ ಸಹೋದರರು. ಅವರೆಂದರೆ ಖಂಡೆಪ್ಪ, ಗುಡಪ್ಪ, ಗಂಗಪ್ಪ ಇರುತ್ತಾರೆ. ಕಂಡೆಪ್ಪ ಮತ್ತು ಗುಡಪ್ಪಗೆ ಗಂಡು ಮಕ್ಕಳು ಇರಲಿಲ್ಲ ಎಂದರೆ ಸಾಕ್ಷಿಯು ಕಂಡೆಪ್ಪಗೆ ಮಕ್ಕಳೆ ಇರಲಿಲ್ಲ, ಗುಡ್ಡಪ್ಪಗೆ ಒಬ್ಬಳು ಹೆಣ್ಣು ಮಗಳು ಎಂದು ಹೇಳುತ್ತಾರೆ. ಗುಡ್ಡಪ್ಪ ಮಗಳ ಜಾನವ್ವ ಎಂದು ಇರುತ್ತದೆ. ನನ್ನ ಅಜ್ಜರ ತಮ್ಮ ಗಂಗಪ್ಪ ಇರುತ್ತಾರೆ. ಅವರಿಗೆ ಚಂದ್ರಶೇಖರ ಎಂಬ ಗಂಡು ಮಗ ಇದ್ದರು. ಅವರಿಗೆ ನಿರ್ಮಲಾದೇವಿ, ಸಂಕಪ್ಪ, ಪಾಂಡುರಂಗಪ್ಪ, ಅಶೋಕ, ಶಾಂತವ್ವ ಮತ್ತು ಸಂಕವ್ವ ಮಕ್ಕಳು ಎಂದರೆ ನಿಜ. ಗಂಗಪ್ಪಗೆ ಇಬ್ಬರು ಹೆಂಡತಿಯರು ಎಂದರೆ ನಿಜ. ಮೊದಲನೇ ಹೆಂಡತಿ ರುದ್ರವ್ವ, 2 ನೇ ಹೆಂಡತಿ ಮಲ್ಲವ್ವ ಎಂದರೆ ನಿಜ. ರುದ್ರವ್ವಗೆ ಚಂದ್ರಶೇಖರ ಎಂಬ ಒಬ್ಬನೇ ಗಂಡು ಮಗ ಇರುತ್ತಾರೆ. ಮಲ್ಲವ್ವಗೆ ಹೇಮಾವತಿ, ಸಾವಿತ್ರಮ್ಮ, ಗೀರಿಜಮ್ಮ ಎಂಬ ಮಕ್ಕಳು ಎಂದರೆ ಸಾಕ್ಷಿಯು ಇನ್ನೊಬ್ಬ ಮಗಳು ಲಕ್ಷ್ಮವ್ವ ತೀರಿಕೊಂಡರು ಎಂದು ಹೇಳುತ್ತಾರೆ. ಚಂದ್ರಶೇಖರವರ ಹಿರಿಯ ಗಂಡು ಮಗ ಸಂಕಪ್ಪ ಗುಡ್ಡಪ್ಪ ಎಂಬುವವರಿಗೆ ದತ್ತಕ ಹೋದರು. ಅವರ ಇನ್ನೊಬ್ಬ ಮಗ ಪಾಂಡುರಂಗ ಕಂಡಪ್ಪ ಎಂಬುವವರಿಗೆ ದತ್ತಕೆ ಹೋದರು ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಅನುಸೂಚಿತ-ಕೆ ಮತ್ತು ಎಲ್ ನಲ್ಲಿ ಎಲ್ಲ ಸಂಗತಿಯನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಗುಡ್ಡಪ್ಪ ಮತ್ತು ಪಾರ್ವತಿಯವರ ಮಗಳು ಜಾನವ್ವಗೆ ಮದುವೆ ಆಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಜಾನವ್ವನ ತಾಯಿ ಪಾರ್ವತಮ್ಮ ಎಂದರೆ ನಿಜ. ನಾನು ಹಾಜರು ಪಡಿಸಿರುವ ನಿಪಿ-1 ರಿಂದ 26 ಓದಿ ತಿಳಿದುಕೊಂಡಿರುತ್ತೇನೆ. ನಿಪಿ-1 ರಲ್ಲಿ 2 ನೇ ಪುಟ, 2 ನೇ ಪ್ಯಾರಾದಲ್ಲಿ ಪಾರ್ವತೆವ್ವಗೆ

ಮದುವೆಯಾಗಿ ಒಬ್ಬ ಮಗಳು ಇರುವ ವಿಚಾರ ನಮೂದಿಸಿದೆ ಎಂದರೆ ಸಾಕ್ಷಿಯು ನನಗೆ ಈ ವಿಷಯ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಿಪಿ-1 ರ ಸದರಿ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು. ಅನುಸೂಚಿ-ಕೆ ಮತ್ತು ಎಲ್ ವಂಶವೃಕ್ಷ ಸಂಪೂರ್ಣ ತಪ್ಪು ಇದೆ ಎಂದರೆ ಸರಿಯಲ್ಲ. ಜಾನವ್ವ ಅವಿವಾಹಿತವಾಗಿ ತೀರಿಕೊಂಡಿರುತ್ತಾರೆ ಎಂದು ಉದ್ದೇಶಪೂರ್ವಕವಾಗಿ ಬರೆಸಿರುತ್ತೇವೆ ಎಂದರೆ ಸರಿಯಲ್ಲ, ನನಗೆ ಮಾಹಿತಿ ಇರುವುದಿಲ್ಲ. ನನ್ನ ತಂದೆಗೆ ಇಬ್ಬರೂ ಜನ ಹೆಂಡತಿಯರು ಎಂದರೆ ನಿಜ. ಮೊದಲನೇಯವರು ತೀರಿಕೊಂಡ ನಂತರ 2 ನೇ ಮದುವೆ ಆಗಿರುತ್ತಾರೆ. ಮೊದಲನೇ ಹೆಂಡತಿ ಹೆಸರು ಶಕುಂತಲಾ ಎಂದರೆ ನಿಜ. ಶಕುಂತಲಾ ಗಂಗಪ್ಪನ 2 ನೇ ಹೆಂಡತಿ ಮಲ್ಲವ್ವನ 2 ನೇ ಮಗಳಾದ ಸಾವಿತ್ರವ್ವನ ಮೊದಲನೇ ಮಗಳು ಎಂದರೆ ನಿಜ. ಮೊದಲನೇ ಹೆಂಡತಿ ಶಕುಂತಲಾ ಮೃತಪಟ್ಟಿರುತ್ತಾರೆ ಎಂದು ನಮ್ಮ ವಂಶಾವಳಿಯಲ್ಲಿ ತೋರಿಸಿರುವುದಿಲ್ಲ. ನನ್ನ ತಂದೆಯ 2 ನೇ ಹೆಂಡತಿಯ ಮೊದಲ ಹೆಸರು ಹೇಮಾ ಆದರೆ ನನ್ನತಂದೆ ಅವರನ್ನು ಶಕುಂತಲಾ ಎಂದು ಕರೆಯುತ್ತಾರೆ. ನಾನು ಶಾರದಾ, ಗಂಗಾಧರ ಮತ್ತು ಸುಧಾ 1 ನೇ ಹೆಂಡತಿಯ ಮಕ್ಕಳು ಇರುತ್ತೇವೆ. ನಮ್ಮ ವಂಶಾವಳಿಯಲ್ಲಿ ನಾವು 1 ನೇ ಹೆಂಡತಿಯ ಮಕ್ಕಳು ಎಂದು ತೋರಿಸಿರುವುದಿಲ್ಲ ಎಂದರೆ ನಿಜ. ಈ ಸಂಗತಿಯನ್ನು ಉದ್ದೇಶಪೂರ್ವಕವಾಗಿ ಮುಚ್ಚಿ ಇಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆ ಗುಡ್ಡಪ್ಪರವರಿಗೆ ದಿನಾಂಕಃ 19.02.1949 ರಲ್ಲಿ ದತ್ತಕ ಹೋಗಿರುತ್ತಾರೆ.

ಈ ದಾವೆಯಲ್ಲಿ ಶೇತ್ಕರಿ ಜಮೀನಿನ ಅಳತೆ, ಸರ್ವೆ ನಂ. ಮತ್ತು ಇತರೆ ವಿವರಣೆಯನ್ನು ಉತಾರ ನೋಡಿ ಬರೆಸಿರುತ್ತೇನೆ. ನಿಪಿ-21 ರಿಂದ 26 ರ ದಾಖಲೆ ಮತ್ತು ನಮ್ಮ ದಾವಾ ಅನುಸೂಚಿ- ಇ, ಜಿ, ಐ ವಿವರಣೆ ತಾಳೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅನುಸೂಚಿತ-ಇ ಸರ್ವೆ ನಂ-35 10 ಎಕರೆ 30 ಗುಂಟೆ ನಿಪಿ-22 ಇರುತ್ತದೆ. ನಿಪಿ-22 ರಲ್ಲಿ ಸರ್ವೆ ನಂ. 35 ಹಿಸ್ಸಾ ನಂ-3 ಇದೆ ಎಂದರೆ ನಿಜ. ಅದರ ಕ್ಷೇತ್ರ 03 ಎಕರೆ 31 ಗುಂಟೆ ಇರುತ್ತದೆ. ಅನುಸೂಚಿತ-ಜಿ ಸರ್ವೆ ನಂ-36 08 ಎಕರೆ ನಿಪಿ-21 ಇರುತ್ತದೆ. ನಿಪಿ-21 ರಲ್ಲಿ ಸರ್ವೆ ನಂ. 36/3 ಹಿಸ್ಸಾ ನಂ-3 ಇದೆ ಎಂದರೆ

ನಿಜ. ಅನುಸೂಚಿತ-ಜೆ ಸರ್ವೆ ನಂ-35 ಮತ್ತು 36 ರಲ್ಲಿ 12 ಎಕರೆ ನಿಪಿ-23 ಇರುತ್ತದೆ. ನಿಪಿ-23 ರಲ್ಲಿ ಸರ್ವೆ ನಂ. 35 ಮತ್ತು 36 ಎಂದು ಇರುವುದಿಲ್ಲ, ಆದರೆ ನ 36 ಇರುತ್ತದೆ. ಅದರ ಹಿಸ್ಸಾ ನಂ. 1 ಇರುತ್ತದೆ. ಶೆಡ್ಯೂಲ್-ಜೆ.ನಲ್ಲಿ ಹಿಸ್ಸಾ ನಂ. 1 ಎಂದು ಬರೆದಿರುವುದಿಲ್ಲ. ಅದರ ಕ್ಷೇತ್ರ 03 ಎಕರೆ 07 ಗುಂಟೆ ಇದೆ ಎಂದರೆ ಸಹೋದರರರು ಭಾಗ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಕದರಮಂಡಲಗಿಯ ಛತ್ರದ ಮಠದವರು ಖರೀದಿಸಿ ಭಾಗ ಮಾಡಿಕೊಂಡಿರುತ್ತಾರೆ. ಯಾವ ವರ್ಷದಲ್ಲಿ ಖರೀದಿ ಮಾಡಿಕೊಂಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಹಿಸ್ಸೆ ಯಾವಾಗ ಮಾಡಿಕೊಂಡಿರುತ್ತಾರೆ ಎಂದು ಮಾಹಿತಿ ಇರುವುದಿಲ್ಲ. ನಮ್ಮ ದಾವೆಯ ಎಲ್ಲ ಅನುಸೂಚಿತಗಳು ತಪ್ಪು ಇವೆ ಎಂದರೆ ಸರಿಯಲ್ಲ. ಅವುಗಳು ತಾಳೆ ಆಗುವುದಿಲ್ಲ ಎಂದರೆ ಸರಿಯಲ್ಲ. ಕದರಮಂಡಲಗಿ ಗ್ರಾಮದ ಸರ್ವೆ ನಂ. 35 ರಲ್ಲಿ 3 ಹಿಸ್ಸೆ ಆಗಿರುತ್ತದೆ. ಅದು ಯಾವ ಪೂರ್ಣ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಈ 3 ಹಿಸ್ಸೆಯಲ್ಲಿ ನನ್ನ ತಂದೆ ಹೆಸರಿಗೆ 03 ಎಕರೆ 31 ಗುಂಟೆ, ನನ್ನ ಹೆಸರಿಗೆ 03 ಎಕರೆ 20 ಗುಂಟೆ, ನನ್ನ ಸಹೋದರ ಗಂಗಾಧರ ಹೆಸರಿಗೆ 03 ಎಕರೆ 20 ಗುಂಟೆ ಇರುತ್ತದೆ. ನನ್ನ ಹಾಗೂ ನನ್ನ ಸಹೋದರನ ಹೆಸರಿಗಿರುವ ಹಿಸ್ಸಾ ಸಂಖ್ಯೆ ಯಾವುದು ಎಂಬ ಪ್ರಶ್ನೆಗೆ ಸಾಕ್ಷಿಯು ಹಿಸ್ಸಾ ಆಗಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ. 35 03 ಹಿಸ್ಸೆ ಆಗಿರುತ್ತದೆ ಎಂದು ನನ್ನ ದಾವೆಯಲ್ಲಿ ಬರೆಸಿರುವುದಿಲ್ಲ. ಕದರಮಂಡಲಗಿ ಗ್ರಾಮದ ಸರ್ವೆ ನಂ. 36 ಒಟ್ಟು 08 ಎಕರೆ ಇದ್ದು ಅದು ಸಹ ಹಿಸ್ಸೆ ಆಗಿರುವುದಿಲ್ಲ. ಕದರಮಂಡಲಗಿ ಗ್ರಾಮದ ಸರ್ವೆ ನಂ 35 ಮತ್ತು 36 ಶೇತ್ಕರಿ ಜಮೀನು ಗುಡ್ಡಪ್ಪಜ್ಜ ರವರಿಗೆ ಸೇರಿದ್ದು ಇರುತ್ತದೆ. ಸದರಿ ಜಮೀನುಗಳು ಮೂಲತಃ ಹಾವೇರಿ ಜಿಃ ಕಾಟೇನಹಳ್ಳಿ ಗ್ರಾಮದ ಮಹಲಿಂಗಪ್ಪ ನೆಲವಗಿ ಎಂಬುವವರದ್ದು ಎಂದರೆ ಗೊತ್ತಿರುವುದಿಲ್ಲ. ಅವರು 1929 ರಲ್ಲಿ ಮೃತ ಪಟ್ಟ ನಂತರ ಅವರ ಮಗ ಚನ್ನಪ್ಪ ನೆಲವಗಿ ರವರಿಗೆ ಬಂದಿತ್ತು ಎಂದರೆ ನಿಜ. ಗುಡ್ಡಪ್ಪಜ್ಜ ಮತ್ತು ನಮ್ಮ ಅಜ್ಜ ಸದರಿ ಜಮೀನುಗಳು ಖರೀದಿ ಮಾಡಿರುತ್ತಾರೆ. 1942 ರಲ್ಲಿ ಅವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನಿಜ. ಗುಡ್ಡಪ್ಪಜ್ಜ ಮತ್ತು ಚಂದ್ರಶೇಖರಪ್ಪರವರಿಗೆ ಸದರಿ ಆಸ್ತಿಗಳಲ್ಲಿ ಸಮಾನ ಹಕ್ಕು ಇದೆ

ಎಂದರೆ ನಿಜ. 1948 ರಲ್ಲಿ ಗುಡ್ಡಪ್ಪಜ್ಜ ಮೃತಪಟ್ಟಿರುತ್ತಾನೆ. ನಂತರ ಚಂದ್ರಶೇಖರಪ್ಪರ ನವರು ನಾನೊಬ್ಬನೇ ವಾರಸುದಾರ ಎಂದು ವರದಿ ಕೊಟ್ಟು ಸರ್ವೆ ನಂ. 35 ಮತ್ತು 36 ರ ಡ-1920 ರಂತೆ ತನ್ನ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ನಿಜ, ನಂತರ ದತ್ತಕ ಪತ್ರ ಕೊಟ್ಟು ನಮ್ಮ ತಂದೆಯ ಹೆಸರಿಗೆ ಬದಲಾವಣೆ ಆಗಿರುತ್ತದೆ ನಂತರ ಗುಡ್ಡಪ್ಪನ ಹೆಂಡತಿ ಪಾರ್ವತೆವ್ವ ನಾನು ವಾರಸುದಾರ ಇರುತ್ತೇನೆ ಎಂದು ವರದಿ ಕೊಟ್ಟ ಮೇರೆಗೆ ಡ-1921 ರಂತೆ ಆಸ್ತಿಗಳು ಪಾರ್ವತೆವ್ವನ ಹೆಸರಿಗೆ ಆಗಿರುತ್ತದೆ ಎಂದರೆ ನಿಜ. ಆಗ ತಹಶೀಲ್ದಾರ ಕಚೇರಿಯಲ್ಲಿ ಆರ್.ಟಿ.ಎಸ್. ಗಳಲ್ಲಿ ರಿಕಾರ್ಡ ಆಗಿರುತ್ತದೆ. ಸದರಿ ಪ್ರಕರಣಗಳಲ್ಲಿ ಡ-1920 ರದ್ದಾಗಿ ಡ-1921 ಮಂಜೂರಾಗಿ ಹೊಸದಾಗಿ ಡ-1950 ಆಗಿರುತ್ತದೆ ಎಂದರೆ ನಿಜ. ನಂತರ ಗುಡ್ಡಪ್ಪನ ಹೆಂಡತಿ ಪಾರ್ವತೆವ್ವ ಇನ್ನೊಬ್ಬ ಸಾಮೂಹಿಕ ಮಾಲೀಕರಾದ ಚಂದ್ರಶೇಖರವರ ಹೆಸರು ಜಂಟಿಯಾಗಿ ನಮೂದಿರುತ್ತದೆ ಎಂದರೆ ಸರಿಯಲ್ಲ. ನಂತರ ಪಾರ್ವತೆವ್ವ ನನ್ನ ತಂದೆಯನ್ನು ದತ್ತಕ ಪಡೆದಿದ್ದರಿಂದ ಆ ಪ್ರಕಾರ ಪಾರ್ವತೆವ್ವ ಹೆಸರು ಕಡಿಮೆ ಮಾಡಿ ನನ್ನ ತಂದೆಯ ಹೆಸರನ್ನು ಸೇರಿಸಿದರು ಎಂದರೆ ನಿಜ. ಈ ಕದರಮಂಡಲಗಿ ಗ್ರಾಮದ ಡ-2035 ಮಂಜೂರಾಗಿರುತ್ತದೆ ಎಂದರೆ ನಿಜ. ಚಂದ್ರಶೇಖರಪ್ಪ ಮತ್ತು ಪಾರ್ವತೆವ್ವ ಜೀವಂತ ಇರುವ ಕಾಲಕ್ಕೆ 1978 ರಲ್ಲಿ ಸರ್ವೆ ನಂ. 35 ಮತ್ತು 36 ಹಿಸ್ಸೆ ಆಗಿರುತ್ತವೆ ಎಂದರೆ ಸರಿಯಲ್ಲ. ಆ ಹಿಸ್ಸೆಯಲ್ಲಿ ಚಂದ್ರಶೇಖರಪ್ಪ ಗಂಗಪ್ಪ ಮದ್ದಣ್ಣನವರ, ಸಂಕಪ್ಪ ಉರ್ಫ ಮನೋಹರ ದತ್ತಕ ತಂದೆ ಗುಡ್ಡಪ್ಪ ಮುದ್ದಣ್ಣನವರ, ಪಾಂಡುರಂಗಪ್ಪ ದತ್ತಕ ತಂದೆ ಗಂಗಪ್ಪ ಮುದ್ದಣ್ಣನವರ, ಮಲ್ಲವ್ವ ಕೋಂ ಗಂಗಾಧರಪ್ಪ ಮುದ್ದಣ್ಣನವರ ಇವರಗಳ ಮದ್ಯೆ ಪಾಲ ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಪಾಲು ವಿಭಾಗದಲ್ಲಿ ಸರ್ವೆ ನಂ. 36 ಉತ್ತರ ದಿಕ್ಕಿನ 5 ಎಕರೆ 36 ಗುಂಟೆ ಚಂದ್ರಶೇಖರಪ್ಪಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 35/1 ಉತ್ತರ ದಿಕ್ಕಿನ 6 ಎಕರೆ 14 ಗುಂಟೆ ಚಂದ್ರಶೇಖರಪ್ಪಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 35/2 ರಲ್ಲಿ ಪಶ್ಚಿಮ ದಿಕ್ಕಿಗೆ 7 ಎಕರೆ ಸಂಕಪ್ಪ ಉರ್ಫ ಮನೋಹರ ದತ್ತಕ ತಂದೆ ಗುಡ್ಡಪ್ಪ ಮುದ್ದಣ್ಣನವರ ಬಂದಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 35/3 ರಲ್ಲಿ ಪೂರ್ವ

ದಿಕ್ಕಿಗೆ 3 ಎಕರೆ 31 ಗುಂಟೆ ಮಲ್ಲವ್ವ ಕೋಂ ಗಂಗಾಧರಪ್ಪ ಮುದ್ದಣ್ಣನವರ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂ. 36/2 ರಲ್ಲಿ ದಕ್ಷಿಣ ದಿಕ್ಕಿಗೆ 8 ಎಕರೆ ಪಾಂಡುರಂಗಪ್ಪ ದತ್ತಕ ತಂದೆ ಗಂಗಪ್ಪ ಮುದ್ದಣ್ಣನವರ ಬಂದಿರುತ್ತದೆ ಎಂದರೆ ಸರಿಯಲ್ಲ. ಈ ಕದರಮಂಡಲಗಿ ಗ್ರಾಮದ ಡ-5133 ಆಗಿದ್ದು ಈಗಲೂ ಚಾಲ್ತಿಯಲ್ಲಿದೆ ಎಂದರೆ ಸರಿಯಲ್ಲ. ಈ ಬಗ್ಗೆ ದಾವೆ ಹಾಕುವ ಬದಲು ನನಗೆ ಮಾಹಿತಿ ಇದ್ದರೂ ವಸ್ತು ವಿಷಯನ್ನು ಮರೆಮಾಚಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ_ಪಾಟೀ_ಸವಾಲುಃ**

ಕೋರಿಕೆ ಮೇರೆಗೆ ಮುಂದೂಡಲಾಗಿದೆ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.